ಆ ರೀತಿ ಕೊಟ್ಟರೂ ಕೂಡ 13 ಪ್ರಾಥಮಿಕ ಶಾಲೆಗಳು ನಬಾರ್ಡ್‌ನಲ್ಲಿ ಉಳಿದಿದೆ. ಪ್ರೌಢಾಶಾಲೆ 9 ರಲ್ಲಿ 6 ಹಾಗೆಯೇ ಉಳಿದಿದೆ. ಮೂರು–ನಾಲ್ಕು ವರ್ಷಗಳಿಂದ ಅದೇ ರೀತಿ ಉಳಿದಿದೆ. ಮತ್ತು ಅಂಗನವಾಡಿ ಕಟ್ಟಡ ಅವು ಅಪೂರ್ಣವಾಗಿ ಸುಮಾರು ಎಂಟತ್ತು ವರ್ಷದಿಂದ ಹಾಗೆಯೇ ಉಳಿದಿದೆ. ಯಾವ ಕಾರಣಕ್ಕಾಗಿ ಉಳಿದಿದೆ. ಅದು ಆ ಇಲಾಖೆಯಲ್ಲಿ ಅವ್ಯವಸ್ಥೆ ಇದೆ ಎಂಬುದು ನನಗೆ ಕಂಡುಬಂದಿದೆ./ ಇದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ನಾನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ 13 ಪ್ರಾಥಮಿಕ ಶಾಲಾ ಕೊಠಡಿಗಳ ಕೆಲಸ ಪ್ರಗತಿಯಲ್ಲಿ ಇಲ್ಲದೇ ಇರುವ ಬಗ್ಗೆ ಹೇಳಿದ್ದಾರೆ. ಅಲ್ಲಿ ನಿವೇಶನದ ಅಲಭ್ಯತೆಯಿಂದ ಕೆಲಸ ಪ್ರಾರಂಭವಾಗಿಲ್ಲ ಎಂದು ಹೇಳಿ ನಾಲ್ಕು ಕಡೆ ಈ ಪರಿಸ್ಥಿತಿ ಇದೆ. ಉಳಿದ ಕಡೆ ಕೆಲಸವನ್ನು ಪ್ರಾರಂಭ ಮಾಡಬೇಕಾಗಿದೆ ಎಂದು ಹೇಳಿ ನಮಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಮತ್ತೆ ಹೈಸ್ಕೂಲ್‌ಗಳಲ್ಲಿ ಸಹಿತ ಎರಡು ಕಡೆಯಲ್ಲಿ ನಿವೇಶನದ ಅಲಭ್ಯತೆ ಎಂದು ಬರೆದಿದ್ದಾರೆ. ಒಂದು ಕಜರಗಿ ಮತ್ತೊಂದು ಹೊಸೂರು. ಎರಡು ಕಡೆ ನಿವೇಶನದ ಅಲಭ್ಯತೆಯಿಂದ ಮಾಡಿಲ್ಲವೆಂದು ಹೇಳಿದ್ದಾರೆ. ಮತ್ತೊಂದು ಆತನೂರಿನಲ್ಲಿ ಟೆಂಡರ್ ಆಗಿದೆ. ಕೆಲಸ ಪ್ರಗತಿಯಲ್ಲಿದೆ ಎನ್ನುವ ವರದಿ ನಮಗೆ ಬಂದಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಇವತ್ತು ಮೂರು ಅಂಗನವಾಡಿಗಳಲ್ಲಿ ಎಂಟು–ಹತ್ತು ವರ್ಷಗಳಿಂದ ಇವರು ಹೇಳುತ್ತಾರೆ. ಆದರೆ ನಮಗೆ ಕೊಟ್ಟಿರುವ ಮಾಹಿತಿ ಪ್ರಕಾರ 2004–05ನೇ ಸಾಲಿನಲ್ಲಿ ಮಂಜೂರಾಗಿರುವ ಮೂರು ಅಂಗನವಾಡಿಗಳು ಎನ್ನುವ ಮಾಹಿತಿ ಬಂದಿದೆ. ಈ ಮಾಹಿತಿಯೇನಾದರೂ ತಪ್ಪಾಗಿದ್ದರೆ ಇನ್ನೊಂದು ಸಲ ಅದರ ಬಗ್ಗೆ ವಿಚಾರಣೆ ಮಾಡಿ ಶೀಘ್ರವಾಗಿ ಆ ಕಾಮಗಾರಿಯನ್ನು ತೆಗೆದುಕೊಳ್ಳುವ ಹಾಗೆ ನಾನು ಕೆಲಸವನ್ನು ಮಾಡಿಕೊಡುತ್ತೇನೆ.

ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆ

95(483); ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ); ಮಾನ್ಯ ಶ್ರೀ ಕೆ.ಎಸ್.ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆಯಿಂದ ಇಂಡಿ ಮತ್ತು ಸಿಂಧಗಿ ತಾಲ್ಲೂಕಿನ ಯಾವ ಯಾವ ಹಳ್ಳಿಗಳ ಜಮೀನುಗಳು ನೀರಾವರಿಗೆ ಒಳಪಡುತ್ತವೆ;

ಆ) ಈ ಯೋಜನೆಯು ಈಗ ಯಾವ ಹಂತದಲ್ಲಿದೆ;

ಇ) ಯಾವ ನಿರ್ದಿಷ್ಟ ಕಾಲಮಿತಿಯೊಳಗಾಗಿ ಮುಕ್ತಾಯಗೊಳಿಸಿ ಕಾಲುವೆಗೆ ನೀರು ಬಿಡಲಾಗುವುದು;

ಈ) ಈ ಕಾಮಗಾರಿ ವಿಳಂಬವಾಗಲು ಕಾರಣಗಳೇನು?

ಶ್ರೀ ಕೆ.ಎಸ್.ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಕೀಂ 'ಎ' ಅಡಿ ಗುತ್ತಿ ಬಸವಣ್ಣ ಏತ ನೀರಾವರಿ (ಇಂಡಿ ಏತ ನೀರಾವರಿ ಯೋಜನೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ 4,000 ಹೆಕ್ಟೇರ್ ಹಾಗೂ ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ 37,900 ಹೆಕ್ಟೇರ್ ಪ್ರದೇಶ ಹೀಗೆ ಒಟ್ಟು 41,900 ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಡುತ್ತದೆ. ಇಂಡಿ ತಾಲ್ಲೂಕಿನ ಕ್ಷೇತ್ರವು ನೀರಾವರಿಗೆ ಒಳಪಟ್ಟಿರುವುದಿಲ್ಲ. ಸದರಿ ಯೋಜನೆಯಿಂದ ಸಿಂದಗಿ ತಾಲ್ಲೂಕಿನ 56 ಹಳ್ಳಿಗಳು ನೀರಾವರಿಗೆ ಒಳಪಡಲಿದ್ದು, ಅವುಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ,ಇ) ಜಾಕ್‌ವೆಲ್ ಕಾಮಗಾರಿ: ಮುಕ್ತಾಯ ಹಂತದಲ್ಲಿದೆ.

ಪಂಪ್ ಅಳವಡಿಕೆ, ಸಬ್‌ಸ್ಟೇಷನ್, ಕಾಮಗಾರಿಗಳು	ತೀವ್ರ ಪ್ರಗತಿಯಲ್ಲಿದ್ದು,
ಟಾನ್ಸ್‌ಮಿಷನ್ ಲೈನ್ ಮುಂತಾದ: ಕಾಮಗಾರಿಗಳು	ಮುಕ್ತಾಯ ಹಂತದಲ್ಲಿದೆ.
ಮುಖ್ಯ ಕಾಲುವೆ: ಕಿ.ಮೀ.97.30ರ ವರೆಗಿನ ಕಾಮಗಾರಿಗಳು	ಮುಕ್ತಾಯ ಹಂತದಲ್ಲಿದೆ.
ವಿತರಣಾ ಕಾಲುವೆ 1 ರಿಂದ 40 ಬಿ ಹಾಗೂ ಇದರಡಿ ಲ್ಯಾಟರಲ್ ಮತ್ತು ಹೊಲಗಾಲುವೆಗಳು:	ಪ್ರಗತಿಯಲ್ಲಿದೆ.

ಸದರಿ ಏತ ನೀರಾವರಿ ಯೋಜನೆಯ ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಮಾರ್ಚ್-2007ರ ಒಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಮುಂಗಾರು ಹಂಗಾಮಿಗೆ ಪಂಪ್‌ಗಳನ್ನು ಅಳವಡಿಸಿ ಪ್ರಾಯೋಗಿಕವಾಗಿ ಕಾಲುವೆಗೆ ನೀರು ಹರಿ ಬಿಡಲು ಉದ್ದೇಶಿಸಲಾಗಿದೆ ಮತ್ತು ಈ ಯೋಜನೆಯಿಂದ ನೀರಾವರಿ ಸೌಲಭ್ಯವನ್ನು ಹಿಂಗಾರು ಹಂಗಾಮಿನಲ್ಲಿ ಪ್ರಾರಂಭಿಸಲಾಗುವುದು.

ಈ) ಯೋಜನೆಯ ಕಾಮಗಾರಿಗಳ ವಿಳಂಬಕ್ಕೆ ಮುಖ್ಯ ಕಾರಣಗಳು ಈ ಕೆಳಗಿನಂತಿವೆ:

1) ಜಾಕ್‌ವೆಲ್ ಕಾಮಗಾರಿಯ ಪ್ರಗತಿಯಲ್ಲಿ ಸ್ಥಳೀಯ ಪರಿಸ್ಥಿತಿಯಂತೆ ಕೆಲವು ತಾಂತ್ರಿಕ ಬದಲಾವಣೆಯ ಅವಶ್ಯಕತೆಯ ಕಾರಣ ಅಡಿಪಾಯದ ಹಾಗೂ ತಡೆಗೋಡೆಯ ವಿನ್ಯಾಸ ಅಂತಿಮಗೊಳಿಸಿ, ಅನುಮೋದನೆ ನೀಡುವಲ್ಲಿ ಹಾಗೂ ಜಾಕ್‌ವೆಲ್, ಪಂಪಿಂಗ್ ಸಿಸ್ಟಂ ಇತ್ಯಾದಿಗಳ ನಿರ್ಮಾಣ ಬೇರೆ ಬೇರೆ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದ್ದು, ವಿನ್ಯಾಸ ಹಾಗೂ ನಕ್ಷೆಗಳಿಗೆ ಕೆ.ಪಿ.ಟಿ.ಸಿ.ಎಲ್. ಬೆಸ್ಕಾಂಗಳಿಂದ ಅನುಮೋದನೆ ಪಡೆದುಕೊಳ್ಳುವಲ್ಲಿ ಹೆಚ್ಚಿನ ಸಮಯ ತೆಗೆದುಕೊಂಡಿದೆ.

2) ಕಾಲುವೆ ಕಾಮಗಾರಿಗಳ ನಿರ್ವಹಣೆಯಲ್ಲಿ ರೈತರ ಕೋರಿಕೆಗಳನ್ವಯ ಮತ್ತು ತಾಂತ್ರಿಕ ಕಾರಣಗಳಿಂದ ಕೆಲವು ಹೆಚ್ಚುವರಿ ಸಿ.ಟಿ.ಸಿ/ಸಿ.ಡಿ. ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಅಲ್ಲದೇ ಕಾಲುವೆಯ ಬ್ಯಾಂಕಿಂಗ್ ರೀಚ್‌ನಲ್ಲಿ ಕೆಲವೆಡೆ ಸ್ಥಳೀಯ ವಿಶಿಷ್ಟತೆಗನುಗುಣವಾಗಿ ವಿನ್ಯಾಸದಲ್ಲಿನ ಮಾರ್ಪಾಡುಗಳ ಅವಶ್ಯಕತೆ ಕಂಡುಬಂದಿರುತ್ತದೆ. ಈ ಕಾರಣಗಳಿಂದಾಗಿ ಕಾಮಗಾರಿಗಳ ಪರಿಮಾಣದಲ್ಲಿ ಹೆಚ್ಚುವರಿ ಉಂಟಾಗಿದ್ದು, ಇದಕ್ಕೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯುವಲ್ಲಿ ಹೆಚ್ಚಿನ ಕಾಲಾವಕಾಶ ಉಂಟಾಗಿರುತ್ತದೆ.

ಅನುಬಂಧ

ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಕೀಂ 'ಎ' ಅಡಿ ಗುತ್ತಿ ಬಸವಣ್ಣ ಏತ ನೀರಾವರಿ (ಇಂಡಿ ಏತ ನೀರಾವರಿ) ಯೋಜನೆಯಡಿ ನೀರಾವರಿ ಸೌಲಭ್ಯಕ್ಕೆ ಒಳಪಡುವ ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಗ್ರಾಮಗಳ ವಿವರಗಳು.

ಕ್ರ.ಸಂ	ಗ್ರಾಮದ ಹೆಸರು	ಕ್ರ.ಸಂ	ಗ್ರಾಮದ ಹೆಸರು	ಕ್ರ.ಸಂ	ಗ್ರಾಮದ ಹೆಸರು
1	ಅಸಂತಾಪೂರ	20	ಹೊನ್ನಳ್ಳಿ	39	ಸಾಲದಹಳ್ಳಿ
2	ವಂದಗನೂರ	21	ಅಲಗೊಡ	40	ಕದರಾಪೂರ
3	ಖಾನಪೂರ	22	ಯಲಗೊಡ	41	ಕರುವಿನಹಳ್ಳಿ
4	ವಂದಾಲ	23	ದವಲಾರ	42	ಹಿಂಬಾಳ
5	ಬ್ರಹ್ಮದೇವನಮಡು	24	ಸಾಸಬಾಳ	43	ಯಂಕಂಜಿ
6	ಗೋಲಗೇರಿ	25	ಗುಬ್ಬೇವಾಡ	44	ಮಡವಾಳ
7	ಸಿಂದಗೇರಿ	26	ಬ್ಯಾಕೋಡ	45	ಅಂತರಗಂಗೇ
8	ಬನಹಟ್ಟಿ	27	ಯರಗಲ್	46	ಬಂಕಲಗಿ
9	ಮನ್ನಾಪೂರ	28	ಯರಗಲ್(ಬಿ.ಕೆ.)	47	ಬ್ಯಾಳಿಹಾಳ
10	ಗುತ್ತರಗಿ	29	ಚಿಕ್ಕಯರಗಲ್	48	ಹಿರೆಯರಗಲ್
11	ಸಿಂದೆಗಿ	30	ಬಬಲೇಶ್ವರ	49	ರಾಂಪುರ
12	ಬೆನ್ನಾಕೊಟಗಿ	31	ಕಾಲಹಳ್ಳಿ	50	ಗಣಿಹಾರ
13	ರಾಂಪುರ ತಾಂಡಾ	32	ಹಿಕ್ಕನಗುತ್ತಿ	51	ಹಿಕ್ಕನಗುತ್ತಿ ತಾಂಡಾ
14	ಬಳಗಾನೂರ	33	ಚಾಂದಕವೆಚಿ	52	ಸೋಮಾಪೂರ
15	ಬಂಡಾಳ	34	ಕನ್ನೊಳ್ಳಿ	53	ಬೂದಿಹಾಳ
16	ಓತಿಹಾಳ	35	ಹಬ್ಯಾಳ	54	ಗುಡಿಹಾಳ
17	ಬಂಧನಾಳ	36	ಸೂಗಿಹಾಳ	55	ಚಟ್ಟರಕಿ
18	ಚಿಕ್ಕರೂಗಿ	37	ಕಡ್ಲೇವಾಡ	56	ರೂಗಿ ತಾಂಡ
19	ಹಾಲಗುಂಡಕನಾಳ	38	ಚಟ್ನಳ್ಳಿ		

ಶ್ರೀ ಶಿವಾನಂದ ಎಸ್ ಪಾಟೀಲ್: ಮಾನ್ಯ ಅಧ್ಯಕ್ಷರೇ, ಇದು ಪಾಲಿಸಿ ಮ್ಯಾಟರ್. ಅವರು ಇದಕ್ಕೆ ಉತ್ತರವನ್ನು ಕೊಡುವುದು ಸಮಂಜಸವಾಗಲಿಕ್ಕಿಲ್ಲ. ತಾವು ಉತ್ತರವನ್ನು ಕೊಡುತ್ತೀರಾ? ನನ್ನದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು: ಅವರು ಉತ್ತರ ಕೊಡುವುದಕ್ಕೆ ನಿಂತಿದ್ದಾರೆ. ಕೊಡುತ್ತೀರಾ ಎಂದು ಕೇಳಿದರೆ ಹೇಗೆ? ಅವರು ರೆಡಿಯಾಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಮಾನ್ಯ ಚೆಲುವರಾಯಸ್ವಾಮಿಯವರನ್ನು ಎಷ್ಟು ಇಲಾಖೆಗಳಿಗೆ ಮಂತ್ರಿಯನ್ನಾಗಿ ಮಾಡಿದ್ದೀರಿ ಎಂದು ತಿಳಿಸಬೇಕು.

ಅಧ್ಯಕ್ಷರು: ಮಾನ್ಯ ಸದಸ್ಯರಿಗೆ ಹೆಚ್ಚಿನ ಮಾಹಿತಿ ಬೇಕಾದರೆ...

ಶ್ರೀ ಎನ್.ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರುಗಳು ಯಾರೂ ಇಲ್ಲಿ ಇದ್ದುಕೊಂಡು ತಪ್ಪಿಸಿಕೊಂಡಿಲ್ಲ. ತಮಗೆ ಗೊತ್ತಿರುವ ಹಾಗೆ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ನೀರಾವರಿ ಸಚಿವರು ಮತ್ತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಸಚಿವರುಗಳು ದೆಹಲಿಯಲ್ಲಿದ್ದಾರೆ. ಆಕಸ್ಮಿಕವಾಗಿ ಈ ರೀತಿ ಆಗಿರುವುದು.

ಶ್ರೀ ಶಿವಾನಂದ ಪಾಟೀಲ್: ರೆಫರ್ ಮಾಡಿ ನಾಳೆಗೆ ಹಾಕಿ ಸಾರ್.

ಅಧ್ಯಕ್ಷರು: ಏನಾಗಿದೆ ಎಂದರೆ ನಾಳೆಯೇ ಕೊನೆಯ ದಿವಸ. ಆಮೇಲೆ ತಮಗೆ ಉತ್ತರ ಸಿಗುವುದಿಲ್ಲ.

ಶ್ರೀ ಶಿವಾನಂದ ಎಸ್.ಪಾಟೀಲ್: ಈ ಪ್ರಶ್ನೆಯನ್ನು ಮೂರನೇ ಸಾರಿ ಮುಂದಕ್ಕೆ ಹಾಕುತ್ತಿರುವುದು.

ಶ್ರೀ ಎನ್.ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೇ, ತಾವು ಅನುಮತಿಯನ್ನು ಕೊಟ್ಟರೆ ನಾಳೆ ಬೇಕಾದರೆ ಅವರಿಗೆ ಅವಕಾಶವನ್ನು ಕೊಡಿ. ಇಲ್ಲದಿದ್ದರೆ ಅವರ ಜೊತೆ ಪ್ರತ್ಯೇಕವಾಗಿ ಮಾತನಾಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾನು ಮಾನ್ಯ ಸಚಿವರಿಗೆ ಹೇಳುತ್ತೇನೆ.

ಶ್ರೀ ಶಿವಾನಂದ ಎಸ್.ಪಾಟೀಲ್: ನಾಳೆ ಅವಕಾಶ ಕೊಡಿ. ಇದು ಬಹಳ ಮುಖ್ಯವಾದುದು. ಮಾನ್ಯ ಸಚಿವರಿಗೆ ಉತ್ತರ ಹೇಳಲು ಆಗುವುದಿಲ್ಲ. ನೋಡಿ ಅಲ್ಲಿ ಇರಿಗೇಷನ್ ಸೆಕ್ರೆಟರಿ ಇಲ್ಲ.

ಅಧ್ಯಕ್ಷರು: ಆಯಿತು, ಜಲಸಂಪನ್ಮೂಲ ಸಚಿವರು ಬಂದಾಗ ತೆಗೆದುಕೊಳ್ಳೋಣ.

ಶ್ರೀ ಎನ್.ಚೆಲುವರಾಯಸ್ವಾಮಿ: ಪಾಲಿಸಿ ಮ್ಯಾಟರ್ ಇದೆ. ಸಚಿವರು ಬರಬೇಕೆಂದು ಕೇಳುವುದು ಮಾಹಿತಿ ಬೇಕು. ಅದರ ಜೊತೆಗೆ ನಾಳೇನೇ ತೆಗೆದುಕೊಳ್ಳುತ್ತೇವೆಂದರೆ ತಾವೇನು ಆದೇಶ ಕೊಡುತ್ತಿರೋ ಕೊಡಿ.

ಅಧ್ಯಕ್ಷರು: ಆಯಿತು. ಮಾನ್ಯ ವಿಶ್ವನಾಥ ಪಾಟೀಲ್ ಹೆಬ್ಬಾಳ್‌ರವರು ಇಲ್ಲ. ಮುಂದಿನ ಪ್ರಶ್ನೆ ಶ್ರೀ ಬೋಪಯ್ಯನವರದ್ದು.

ಕೊಡಗು ಜಿಲ್ಲೆಯಲ್ಲಿನ ಮಡಿಕೇರಿಯ ಸರ್ಕಾರಿ ಮುದ್ರಣಾಲಯ ಮುಚ್ಚುವ ಸ್ಥಿತಿಯಲ್ಲಿರುವ ಬಗ್ಗೆ.

98(497); ಶ್ರೀ ಬೋಪಯ್ಯ ಕೆ.ಜಿ.(ಮಡಿಕೇರಿ); ಮಾನ್ಯ ಶ್ರೀ ಬಸವರಾಜ್ ಎಸ್.ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಕೊಡಗು ಜಿಲ್ಲೆಯ ಮಡಿಕೇರಿ ನಗರದಲ್ಲಿರುವ ಸರ್ಕಾರಿ ಮುದ್ರಣಾಲಯವು ಅಭಿವೃದ್ಧಿಯಲ್ಲಿದೆಯೇ ಅಥವಾ ಮುಚ್ಚುವ ಹಂತದಲ್ಲಿದೆಯೇ (ವಿವರ ನೀಡುವುದು);

ಆ) ಮುದ್ರಣಾಲಯದಲ್ಲಿ ಸರಬರಾಜಾದ ನಮೂನೆ ವಹಿಗಳನ್ನು ಮೈಸೂರು ಮುದ್ರಣಾಲಯಕ್ಕೆ ವರ್ಗಾಯಿಸಲಾಗಿದೆಯೇ;

ಇ) ಹಾಗಿದ್ದಲ್ಲಿ ಕಾರಣವೇನು;

ಈ) ಮುದ್ರಣಾಲಯದ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಬೇರೆಡೆಗೆ ವರ್ಗಾವಣೆ ಮಾಡಲಾಗಿದೆಯೇ (ವಿವರ ನೀಡುವುದು);

ಉ) ಮುದ್ರಣಾಲಯದಲ್ಲಿರುವ ಯಂತ್ರಗಳು ಚಾಲನೆಯಲ್ಲಿವೆಯೇ;

ಊ) ಇಲ್ಲವೆಂದಾದಲ್ಲಿ ಅದಕ್ಕೆ ಕಾರಣಗಳೇನು (ವಿವರ ನೀಡುವುದು)?

ಶ್ರೀ ಬಸವರಾಜ್ ಎಸ್.ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಕೊಡಗು ಜಿಲ್ಲೆಯ ಸರ್ಕಾರಿ ಶಾಖಾ ಮುದ್ರಣಾಲಯ, ಮಡಿಕೇರಿ ಮುಚ್ಚುವ ಹಂತದಲ್ಲಿರುವುದಿಲ್ಲ. ಆದರೆ, ಇಲ್ಲಿನ ಹಳೆಯ ತಂತ್ರಜ್ಞಾನದ ಮುದ್ರಣ ಯಂತ್ರೋಪಕರಣಗಳಿದ್ದು, ಆಧುನಿಕ ಆಫ್‌ಸೆಟ್ ವಿಧಾನವನ್ನು ಅಳವಡಿಸಿ ಅಭಿವೃದ್ಧಿ ಪಡಿಸಬೇಕಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಇಲ್ಲ.

ಉ) ಹೌದು.

ಊ) ಉದ್ಭವಿಸುವುದಿಲ್ಲ.

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಸರ್ಕಾರಿ ಮುದ್ರಣಾಲಯವನ್ನು ಸ್ಥಳಾಂತರ ಮಾಡುವುದಿಲ್ಲ.